ಶ್ರೀ ವಿ. ವೆಂಕಟಪ್ಪ.—1956ನೆಯ ಇಸವಿ ಮೇ 11ನೇ ತಾರೀಖಿನಿಂದೀಚೆಗೆ ಸೇರ್ಕಡ 3 ರಷ್ಟು ಆದಾಯ ಬಾರದೇ ಹೋದರೆ ಮಂಜೂರು ಮಾಡಕೂಡದೆಂದು ಹೇಳಿದೆ. ಅದಕ್ಕಿಂತ ಹಿಂದೆ ಹಾಗೆ ನಿಯಮವಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಪಬ್ಲಿಕ್ ವರ್ಕ್ಸ್ ಕೋಡಿನಲ್ಲಿ ಶೇಕಡ ಮೂರಕ್ಕಿಂತ ಕಡಮೆ ಆದಾಯ ಬರುವುದಾದರೆ ಕೆಲಸ ತೆಗೆದುಕೊಳ್ಳಕೂಡದೆಂದು ಹೇಳಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲಿ ಒಂದು ಆಡ್ಜೆಸ್ಟಿಜರಿ ಕಾರಣವಿದೆ.

ಶ್ರೀ ವಿ. ವೆಂಕಟಪ್ಪ.—ಇದು ಹೊಸದೇನೂ ಅಲ್ಲ. ಪರಿಶಿಷ್ಟದಲ್ಲಿ ನಮೂದಿಸಿರುವ ಮೂರು ಪ್ರಾಜೆಕ್ಟುಗಳು ಹಿಂದಿನವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ವಿ. ವೆಂಕಟಪ್ಪ.—ಅದಕ್ಕಿಂತ ಈಚೆಗೆ ಆಗಿರುವ ಎಸ್ಟಿಮೇಟನ್ನು ಮಂಜೂರು ಮಾಡಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿರಬಹುದು.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಪರಿಶಿಷ್ಟದಲ್ಲಿರುವ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ತೊಂದರೆ ಯೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಲ್ಪ ಹೆಚ್ಚು ಕಡಮೆಯಾದ್ದರೆ ಸ್ವಲ್ಪ ಲೀನಿಯಂಟಾಗಿ ತೆಗೆದುಕೊಂಡಿದೆ, ಬಹಳ ಹೆಚ್ಚು ಕಡಮೆಯಾದ್ದರೆ ಕೈ ಬಿಟ್ಟಿದೆ.

ಶ್ರೀ ವಿ. ವೆಂಕಟಪ್ಪ.—ಲಂಗೋಜಿ ಹಳ್ಳಕ್ಕೆ ಅಡ್ಡಲಾಗಿ ರಿಜರ್ವಾಯರನ್ನು ಕಟ್ಟುವ ಅಂದಾಜಿನ ಮೇರೆ ಶೇಕಡ 2·5 ರಷ್ಟು ವರಮಾನವಿದೆ. ಅದನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಪುನಃ ವಿಚಾರ ಮಾಡುತ್ತೇವೆ.

Vaduvinakatte near Maddur (Construction).

Q.—688. Sri SHIVANANJE GOWDA (Mysore Taluk).—

Will the Government be pleased to state :—

(*a*) whether they would commence the construction work of Vaduvinakatte near Maddur, Kallahalli, out of the irrigation works sanctioned in Mysore Taluk ;

(*b*) the reasons for not taking up this work ;

(*c*) whether they would take up the said work during the current year ?

A.—Sri A. G. RAMACHANDRA RAO (Minister for Law and Education).—

(*a*) and (*b*) The Project is under investigation.

(*c*) Not possible at this stage.

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕಿನಲ್ಲಿ ಮದ್ದೂರು, ಕಲ್ಲಹಳ್ಳಿ, ಬಳಿ ಅಣೆಕಟ್ಟು ಕಟ್ಟಬೇಕೆಂದು ಸುಮಾರು ನಾಲ್ಕು ವರ್ಷಗಳಿಂದ ಕೇಳುತ್ತಿದ್ದರೂ ಸಾಧ್ಯವಿಲ್ಲವೆಂದು ಉತ್ತರ ಹೇಳುತ್ತಿರುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—" The project is under investigation " ಎಂದು ಉತ್ತರ ಕೊಟ್ಟಿದೆ.

ಶ್ರೀ ಶಿವನಂಜೇಗೌಡ.—ಹಿಂದಿನ ಅಸೆಂಬ್ಲಿ ಅಧಿವೇಶನದಲ್ಲಿ ಜಾಗ್ರತೆಯಾಗಿ ಮಾಡುತ್ತೇವೆಂದು ಜವಾಬು ಕೊಟ್ಟು ಈ ವರ್ಷ ಅದು ಸಾಧ್ಯವಿಲ್ಲವೆಂದು ಹೇಳಲು ಕಾರಣವೇನು, ಸ್ವಾಮಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎರಡು ಪ್ರಾಜೆಕ್ಟುಗಳಿವೆ. ಒಂದು ಎಡುವಿನ ಕಟ್ಟೆ, ಇನ್ನೊಂದು ಹೆಮ್ಮರಗಳ್ಳಿ ಕಟ್ಟೆ. ಹೆಮ್ಮರಗಳ್ಳಿ ಕಟ್ಟೆಯಿಂದ ಅನುಕೂಲ ವಿಲ್ಲ, ಎಡುವಿನಕಟ್ಟೆ ಕಾಮಗಾರಿ ಕೈಕೊಳ್ಳುವುದು ಸೂಕ್ತ ಎಂದು ಶಿಫಾರ್ಸಾಗಿದೆ.

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕಿನಲ್ಲಿ ಹೆಮ್ಮರಗಳ್ಳಿ ಕಟ್ಟೆಯಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಿಂದ ಮೈಸೂರು ತಾಲ್ಲೂಕಿಗೆ ಅನುಕೂಲವಾಗುತ್ತದೆ.

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕು ಅಭಾವ ಪ್ರದೇಶ, ಮೈಸೂರು ಜಿಲ್ಲೆ ಬಹಳ ಹೀನ ಸ್ಥಿತಿಯಲ್ಲದೆ, ಈ ಕೆಲಸ ಆಗಬೇಕೆಂದು ಕೇಳಿದಮೇಲೆ ಎರಡು ಸಾರಿ ಮಾಡುತ್ತೇವೆಂದು ಹೇಳಿ ಈಗ ಮಾಡುವುದಿಲ್ಲವೆಂದು ಹೇಳಿದರೆ ಹೇಗೆ ? ನಾಲ್ಕು ಅಧಿವೇಶನಗಳಲ್ಲಿ ಹಿಂದೆ ಈ ವಿಚಾರ ಬಂದಿತ್ತು. ಆದ್ದರಿಂದ ಕಷ್ಟ ಪರಿಸ್ಥಿತಿಯಿರುವಾಗ ನಣ್ಣ ಕೆಲಸ ಮಾಡಿದರೆ ಜನರು ಅನ್ನ, ಬಟ್ಟೆಯಿಲ್ಲದೆ ಸಾಯುತ್ತಿರುವಾಗ ಅನುಕೂಲವಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲಿಸುತ್ತೇವೆ.

Vidhana Soudha

9 A.M.

Q.—721. Srimathi LAKSHMIDEVI RAMANNA (Hoskote-Aneka).—

Will the Government be pleased to state.—

(*a*) the total amount spent so far for the construction of Vidhana Soudha ;

(*b*) whether it is a fact that sandalwood doors have been prepared for the above building ;

(*c*) if so, the number of doors prepared ; and the amount spent for each one of them ?

A.—Sri A. G. RAMACHANDRA RAO (Minister for Law and Education).—

(*a*) Rs. 1,25,19,179 up to the end of July 1956.